ಬೆಳಕಿನಿಂದ. ಸೂರ್ಯನೇ ಜಗತ್ತಿನ ಆಗುಹೋಗುಗಳಿಗೆ ಕಾರಣ ಎಂದೂ ಹೇಳುವುದಿದೆ. ಇದು ಹೊರಗಿನ ಜಗತ್ತಿನ ಮಾತಾಯಿತು. ನಮ್ಮ ಮನಸ್ಸು ಇನ್ನೊಂದು ಜಗತ್ತನ್ನು ಸೃಷ್ಟಿಸುತ್ತದೆ; ಅದು ನಮ್ಮ ಅಂತರಂಗದ ಜಗತ್ತು. ಮನಸ್ಸು ಇರುವವರೆಗೂ ಈ ಜಗತ್ತಿನ ಕಾಟ ತಪ್ಪದು. ಮನಸ್ಸು ಸೃಷ್ಟಿಸುವ ಈ ಜಗತ್ತು ಯಾವುದೋ ಒಂದು ತರ್ಕಕ್ಕೆ ನಿಲುಕುವಂಥದ್ದಲ್ಲ. ಏಕೆಂದರೆ ಮನಸ್ಸಿನ ಸ್ವಭಾವವೇ ಚಂಚಲ; ಒಂದು ಕ್ಷಣ ಆ ಕಡೆ, ಇನ್ನೊಂದು ಕ್ಷಣ ಈ ಕಡೆ ಎಂದು ಅದು ಅಲೆಯುತ್ತಲೇ ಇರುತ್ತದೆ. ಹೀಗೆ ಅಲೆಯುತ್ತಲೇ ಇರುವ ಮನಸ್ಸು 'ಇದೇ ಸರಿ' ಎಂದೋ ಅಥವಾ 'ಇದೇ ತಪ್ಪು' ಎಂದೋ ಹೇಗೆ ನಿರ್ಧರಿಸಲಾದೀತು? ಸರಿ–ತಪ್ಪು ಏನೆಂದು ತಿಳಿಯದೇ ಇದ್ದಾಗ ನಮಗೆ ಬೇರೆಯವರ ಸರಿ–ತಪ್ಪುಗಳ ಬಗ್ಗೆ ವಿಮರ್ಶೆಯನ್ನು ಹೇಗೆ ಮಾಡುವುದು?

ಸಾಮಾನ್ಯವಾಗಿ ನಾವು ನಮ್ಮ 'ಸರಿ–ತಪ್ಪು'ಗಳನ್ನು ಹೇರುವುದು ಮಕ್ಕಳ ಮೇಲೆಯೇ ಹೌದಲ್ಲವೆ? ಏಕೆಂದರೆ ನಮ್ಮ ತೀರ್ಮಾನವನ್ನು ಅವರ ಮೇಲೆ ಹೇರುವುದು ಸುಲಭವಲ್ಲವೆ? ಹೀಗಾಗಿಯೇ ನಾವು ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಮಕ್ಕಳಿಗೆ 'ಅದು ಮಾಡಬೇಡ', 'ಇದು ಮಾಡಬೇಡ' ಎಂದು ಅವರ ಪ್ರತಿಯೊಂದು ಚಟುವಟಿಕೆಯನ್ನೂ ನಿಯಂತ್ರಿಸುತ್ತಿರುತ್ತೇವೆ. ಈ ರೀತಿಯ ದಬ್ಬಾಳಿಕೆಯು ಮಕ್ಕಳ ಮನಸ್ಸಿನ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂದು ಸುಲಭವಾಗಿ ಹೇಳಲಾಗದು. ಹೀಗೆಂದು ಮಕ್ಕಳನ್ನು ಹತೋಟಿಯಲ್ಲಿಡಬಾರದು, ನಿಯಂತ್ರಿಸಬಾರದು ಎಂದೇನಿಲ್ಲ. ಆದರೆ ಮಕ್ಕಳನ್ನು ಹೇಗೆ ಶಿಕ್ಷಿಸಬೇಕು? ಅವರಿಗೆ ಶಿಕ್ಷಣವನ್ನು ಹೇಗೆ ನೀಡಬೇಕು? ಇದು ನಮ್ಮ ಮುಂದಿರುವ ದೊಡ್ಡ ಪ್ರಶ್ನೆ. ಇದು ನಮ್ಮ ಇಂದಿನ ಶಿಕ್ಷಣವ್ಯವಸ್ಥೆಯ ಬಗ್ಗೆ ಇರುವ ದೊಡ್ಡ ಪ್ರಶ್ನೆಯೂ ಹೌದು. ಇಂಥದೊಂದು ಪ್ರಶ್ನೆಗೆ ಉತ್ತರ ನೀಡುವಂತಿದೆ ಮೇಲಣ ಝೆನ್‌ಕ್ಷಣ.

ರಾತ್ರಿಯ ವೇಳೆಯಲ್ಲಿ ಕಳ್ಳತನದಿಂದ ಗೋಡೆಯನ್ನು ಹಾರಿ ಹೊರಗೆ ಹೋಗುವುದು ಮಠದ ಶಿಸ್ತಿಗೆ ವಿರುದ್ಧವಾದುದು; ತಪ್ಪು. ಆ ಶಿಷ್ಯ ದಿನವೂ ಇಂಥ ತಪ್ಪನ್ನು ಮಾಡುತ್ತಲೇ ಇದ್ದ. ಗುರುಗಳಿಗೆ ಶಿಷ್ಯನ ಆ ತಪ್ಪು ತಿಳಿಯಿತು. ಆದರೆ ಆ ತಪ್ಪಿಗೆ ಅವರು ಕೊಟ್ಟ ಶಿಕ್ಷೆ ಮಾತ್ರ ಅಪೂರ್ವವಾದುದು. ಅವರು ಶಿಷ್ಯನಿಗೆ ಶಿಕ್ಷೆಯನ್ನು ವಿಧಿಸುವ ಬದಲು ತಮಗೆ ತಾವೇ ವಿಧಿಸಿಕೊಂಡರು. ಅಷ್ಟೇ ಅಲ್ಲ, ಶಿಷ್ಯನು ಮಾಡಿದ ತಪ್ಪಿನ ಬಗೆಗಿಂತಲೂ ಆ ತಪ್ಪಿನಿಂದ ಅವನಿಗೆ ಎದುರಾಗಬಹುದಾದ ತಪ್ಪಿನ ಬಗ್ಗೆಯೇ ಅವರು ಹೆಚ್ಚಿನ ಒತ್ತನ್ನು ಕೊಟ್ಟರು. 'ರಾತ್ರಿಯೆಲ್ಲ ಚಳಿಯಲ್ಲಿ ಹೊರಗೆ ತಿರುಗಾಡಿದರೆ ನಿನ್ನ ದೇಹಸ್ಥಿತಿ ಕೆಡುತ್ತದೆ' ಎಂದು ಶಿಷ್ಯನ ಆರೋಗ್ಯದ ಬಗ್ಗೆ ಕಾಳಜಿಯಿಂದ ಎಚ್ಚರಿಕೆ ಕೊಟ್ಟರು. ತಾನು ಮಾಡಿದ ತಪ್ಪಿಗೆ ಶಿಕ್ಷೆ ನೀಡುವ ಬದಲಿಗೆ ತನ್ನ ಆರೋಗ್ಯದ ಬಗ್ಗೆ ಎಚ್ಚರಿಕೆ ಕೊಡುತ್ತಿರುವ ಗುರುಗಳ ವರ್ತನೆ ಶಿಷ್ಯನ ಮನಸ್ಸನ್ನು ಬದಲಾಯಿಸಿತು. ಬಹುಶಃ ಗುರುಗಳು ಶಿಕ್ಷೆಯನ್ನೇ ಕೊಡಲು ಮುಂದಾಗಿದ್ದರೆ ಶಿಷ್ಯನಲ್ಲಿ ಪ್ರತಿರೋಧದ ಬುದ್ಧಿ ಬೆಳೆಯುತ್ತಿತ್ತೇನೋ! ಆದರೆ ಗುರುಗಳು ಹಾಗೆ ಮಾಡಲಿಲ್ಲ. ಇನ್ನೂ ಒಂದು ವಿಶೇಷ ಎಂದರೆ, ಗುರುಗಳ ದೃಷ್ಟಿ ಶಿಷ್ಯನ ತಪ್ಪಿನ ಕಡೆಗೆ ಹೋಗುವುದಕ್ಕಿಂತಲೂ ಅವನ ಆರೋಗ್ಯದ ಕಡೆಗೆ ಹರಿದಿತ್ತು. ಇದು ಶಿಷ್ಯನ ಆತ್ಮಾವಲೋಕನಕ್ಕೆ ಕಾರಣವಾಯಿತು; ಅವನು ಮತ್ತೊಮ್ಮೆ ತಪ್ಪು ಮಾಡಬಾರದೆಂಬ ಅರಿವನ್ನು ಅವನಲ್ಲಿ ಉಂಟುಮಾಡಿತು.

ನಾವು ಇತರರ ತಪ್ಪನ್ನಷ್ಟೆ ಗುರುತಿಸಿ ಅದನ್ನು ಖಂಡಿಸುತ್ತೇವೆ; ಅಥವಾ ಟೀಕಿಸುತ್ತೇವೆ; ಅಥವಾ ಅಪಹಾಸ್ಯ ಮಾಡುತ್ತೇವೆ. ತಪ್ಪನ್ನು ಎತ್ತಿ ಆಡದೆಯೇ ಅವರು ಮಾಡಿರಬಹುದಾದ ತಪ್ಪನ್ನು ಅವರ ಅರಿವಿಗೆ ಬರುವಂತೆ ಮಾಡಬಹುದು. ಆ ಕೆಲಸವನ್ನೇ ಗುರು ಸೆಂಗೈ ಮಾಡಿದ್ದು.